ಪ್ರಸ್ತಾಪಿಸುವುದಾದರೆ, ಕೆಲವು ಅಧಿಕಾರಿಗಳು ರೆಗ್ಯುಲರ್ ಪೊಲೀಸ್ ಠಾಣೆಯಲ್ಲಿದ್ದರೆ, ಅದೇ ರೀತಿ ಕೆಲವು ರೆಗ್ಯುಲರ್ ಫಾರೆಸ್ಟ್ ಆಫೀಸರ್‌ಗಳು ರೆಗ್ಯುಲರ್ ರೇಂಜ್‌ನಲ್ಲಿರುತ್ತಾರೆ. ಆದಕಾರಣ, Promotion policyಗೆ ತಿದ್ದುಪಡಿ ತರಬೇಕು. ಎಲ್ಲಾ ವಿಂಗ್‌ಗಳಲ್ಲೂ ಕೆಲಸ ಮಾಡದವರಿಗೆ ಪ್ರಮೋಷನ್ ಇಲ್ಲವೆಂದು ಕಾನೂನು ತಂದರೆ, ಆಗ ಈ ವರ್ಗಾವಣೆ ಸಮಸ್ಯೆಯೇ ಉದ್ಭವವಾಗುವುದಿಲ್ಲ. ಇವೊತ್ತು ಪ್ರತಿಯೊಬ್ಬರೂ ಶಾಶ್ವತವಾಗಿ ಒಂದೇ ಕಡೆ ಕುಳಿತುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ನಮಗೂ ಸಹ ಮುಜುಗರ. ದಿನದ 24 ಗಂಟೆಗಳೂ, ವರ್ಷದ 365 ದಿವಸಗಳ ಕಾಲ ಮುಖ್ಯಮಂತ್ರಿಗಳ ಹತ್ತಿರ ಹೋಗಿ ವರ್ಗಾವಣೆ ಮಾಡಿಸಿಕೊಡಬೇಕೆಂದು ಹೇಳುವುದು. ಇಲ್ಲದಿದ್ದರೆ, ಇನ್ನೊಬ್ಬರನ್ನು ಉಳಿಸಬೇಕೆಂದು ಹೇಳುವ ಪರಿಸ್ಥಿತಿ ನಿರ್ಮಾಣವಾಗದಂತೆ ದಯವಿಟ್ಟು ಮುಂದಿನ ದಿನಗಳಲ್ಲಿ ತಾವು ಈ ಕುರಿತಂತೆ ಕ್ರಮ ಕೈಗೊಂಡರೆ ಒಳ್ಳೆಯದು ಏಕೆಂದರೆ, ನಿಮ್ಮ ಬಗ್ಗೆ ಸಹಾನುಭೂತಿ ನಮಗೆ ಇದೆ. ನಾವು ಬಂದು ನಿಮ್ಮನ್ನು ನೋಡುತ್ತೇವೆ. I Sympathise. ನಿಮ್ಮ ಪರಿಸ್ಥಿತಿ ಏನೆಂಬುದು ನಮಗೆ ಅರ್ಥವಾಗುತ್ತದೆ. ಅದಕ್ಕೋಸ್ಕರ, ನೀವೆ ಇದನ್ನು ಜಾರಿಗೆ ತಂದರೆ ನಿಮ್ಮ ಪರಿಸ್ಥಿತಿಯೂ ಬದಲಾವಣೆಯಾಗುತ್ತದೆ. ನಿಮಗೂ ಹೆಚ್ಚು ಕೆಲಸ ಮಾಡಲು ಸಾಧ್ಯವಾಗುತ್ತದೆ. ಇದರಿಂದ ನಿಮ್ಮ ಇಲಾಖೆಗಳಲ್ಲಿ ಏನಾಗುತ್ತಿದೆಯೆಂದು ರಿವ್ಯೂ ಮಾಡುವುದಕ್ಕೆ ಅನುಕೂಲವಾಗುತ್ತದಲ್ಲದೆ, ಅದೇ ರೀತಿ ನಿಮ್ಮ ಮಂತ್ರಿಗಳು ಏನು ಕೆಲಸ ಮಾಡುತ್ತಾರೆಂದು ನೋಡುವುದಕ್ಕೂ ಅವಕಾಶವುಂಟಾಗುತ್ತದೆ. ಆದುದರಿಂದ, ಇದನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳಾದ ತಾವು ಒಂದು ಆದೇಶ ಕೊಟ್ಟಿದ್ದೀರಿ. ತಾವು ಕೊಟ್ಟ ಆದೇಶಗಳು ಸರ್ಕಾರಿ ಕಚೇರಿಗಳಲ್ಲಿ ಯಾವ ಹಂತಗಳಲ್ಲಿವೆ? ಯಾವ್ಯಾವುದು ಜಾರಿಗೆ ಬಂದಿದೆ? ಯಾವುದು ಜಾರಿಗೆ ಬರಲಿಲ್ಲ? ಯಾವ ಕಾರಣಕ್ಕಾಗಿ ಜಾರಿಗೆ ಬಂದಿದೆ? ಯಾವ ಕಾರಣಕ್ಕಾಗಿ ಜಾರಿಗೆ ಬಂದಿಲ್ಲ? ಇವೆಲ್ಲದರ ಕಡೆಗೂ ತಾವು ಗಮನಹರಿಸಬೇಕಾಗುತ್ತದೆ.

7.ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ವಿಷಯ: ಬಿಜಾಪುರ ಜಿಲ್ಲೆಯನ್ನು ನೀರಾವರಿಗೊಳಪಡಿಸಬೇಕೆಂದು ಒತ್ತಾಯಿಸಿ ಅಲ್ಲಿನ ರೈತರು ಅಮರಣಾಂತ ಉಪವಾಸ ಕೈಗೊಂಡಿರುವ ಬಗ್ಗೆ

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉಪಸ್ಥಿತರಿರುವುದರಿಂದ ಒಂದು ವಿಷಯವನ್ನು ಅವರ ಗಮನಕ್ಕೆ ತರಬಯಸುತ್ತಿದ್ದೇನೆ. ಬಹುಶಃ ಈ ರೀತಿ ನಾನು ಮಧ್ಯೆ ಪ್ರವೇಶಿಸಿದ್ದು ಸರಿ ಇದೆಯಾ? ಅಥವ ಇಲ್ಲವೋ? ನನಗೆ ಗೊತ್ತಿಲ್ಲ. ಇಡೀ ಬಿಜಾಪುರ ಜಿಲ್ಲೆಯನ್ನು ನೀರಾವರಿಗೊಳಪಡಿಸಬೇಕೆಂದು ಒತ್ತಾಯಿಸಿ ಅಲ್ಲಿನ ರೈತರು ಸರ್ಕಾರವನ್ನು ಒತ್ತಾಯಿಸುವ ಮೂಲಕ ಆಮರಣಾಂತ ಉಪವಾಸ ಕೈಗೊಂಡಿದ್ದಾರೆ. ಇದರಿಂದಾಗಿ ಸುಮಾರು 27 ರೈತರು ಆಸ್ಪತ್ರೆಗೆ ಸೇರಿರುವುದರಿಂದ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಂಡಿದೆ. ಇವೊತ್ತು ಸರ್ಕಾರದ ವತಿಯಿಂದ ಅಲ್ಲಿಗೆ ಯಾರನ್ನಾದರೂ ಕಳುಹಿಸಿದ್ದೀರಾ? ಇದರ ಬಗ್ಗೆ ಏನಾದರೂ ಸೂಕ್ತ ಕ್ರಮ ಕೈಗೊಳ್ಳುತ್ತೀರಾ? ಈ ಕುರಿತಂತೆ ನಾನು ನಿನ್ನೆ ಸಹ ಮಾತನಾಡಿದೆ. ಸಾಧ್ಯವಿದ್ದರೆ, ಸ್ಥಳಕ್ಕೆ ನೀರಾವರಿ ಸಚಿವರನ್ನು ಕಳುಹಿಸಿಕೊಟ್ಟರೆ, ಅವರೊಂದಿಗೆ ನಾನೂ ಸಹ ಹೋಗಿಬರುತ್ತೇನೆ. ಅವರ ಸಮಸ್ಯೆಗೆ ಏನಾದರೊಂದು ಪರಿಹಾರ ಹುಡುಕೋಣವೆಂದು

ತಮ್ಮ ಹತ್ತಿರ ಮಾತನಾಡಿದಾಗ, 'ಆಯಿತು, ಯಡಿಯೂರಪ್ಪನವರೆ, ಮಾತನಾಡೋಣ' ಎಂದಿರಿ. ಆದರೆ, ಇವೊತ್ತು ನೋಡಿದರೆ ಅಲ್ಲಿನ ಪರಿಸ್ಥಿತಿ ದಿನೇದಿನೇ ಕೈತಪ್ಪಿ ಮಿತಿಮೀರಿ ಹೋಗುತ್ತಿದೆ. ಅದಕ್ಕೋಸ್ಕರ, ತಾವು ಇವೊತ್ತು ಯಾರನ್ನಾದರೂ ಅಲ್ಲಿಗೆ ಕಳುಹಿಸಿಕೊಟ್ಟಿದ್ದೀರಾ? ಏನು ಕ್ರಮ ಕೈಗೊಂಡಿದ್ದೀರಿ? ತಾವು ಅನ್ಯಥಾ ಭಾವಿಸದಿದ್ದರೆ, ಆ ಜಿಲ್ಲೆಯ ಹಿತದೃಷ್ಟಿಯಿಂದಾದರೂ ತಾವು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್: ಬೆಳಿಗ್ಗೆ ನಾನೂ ಸಹ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಮಾತನಾಡಿದೆ. ಅಲ್ಲಿಗೆ ಸರ್ಕಾರದ ವತಿಯಿಂದ ಯಾರಾದರೊಬ್ಬರು ಸಚಿವರನ್ನು ಕಳುಹಿಸಿಕೊಟ್ಟು ಸಮಸ್ಯೆಗೆ ಪರಿಹಾರ ಹುಡುಕುವ ಕೆಲಸವಾಗಬೇಕು.

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು):- ಈ ವಿಷಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ನಿನ್ನೆ ಕೂಡ ಪ್ರಸ್ತಾಪಿಸಿದರು. ಅದೇ ರೀತಿ ಬೆಳಿಗ್ಗೆ ಸದಸ್ಯರಾದ ಜಗದೀಶ್ ಶೆಟ್ಟರ್‌ರವರೂ ಕೂಡ ನನಗೆ ಫೋನ್ ಮಾಡಿದರು. ಇವೊತ್ತು ಬೆಳಿಗ್ಗೆ 9.30 ಗಂಟೆಗೆ ಅಲ್ಲಿ ಆಮರಣಾಂತ ಉಪವಾಸ ಕೈಗೊಂಡಿರುವ ಸಂಸದರಾದ ಮಾನ್ಯ ಬಸನಗೌಡ ಪಾಟೀಲ್ ಯತ್ನಾಳ್ ಅವರೊಂದಿಗೆ ಮಾತನಾಡಿದ್ದೇನೆ. ಅವರೊಂದಿಗೆ ಮಾತುಕತೆಯಾಡಿ ಬರಲು ಇವೊತ್ತು ಅಲ್ಲಿಗೆ ಮಾನ್ಯ ಕಂದಾಯ ಸಚಿವರಾದ ಎಂ.ಪಿ.ಪ್ರಕಾಶ್ ಅವರನ್ನು ವಿಶೇಷ ವಿಮಾನದಲ್ಲಿ ಅಲ್ಲಿಗೆ ಕಳುಹಿಸಿಕೊಡುತ್ತಿದ್ದೇವೆ. 2 ಅಥವಾ 8ನೇ ತಾರೀಖಿನಂದು ಸಭೆ ಏರ್ಪಡಿಸಿ, ಅವರನ್ನು ಕರೆಸಿ ಮಾತುಕತೆಯಾಡುವ ವ್ಯವಸ್ಥೆ ಮಾಡುತ್ತೇವೆ.

(ಆ) ವಿರೋಧ ಪಕ್ಷದ ಸದಸ್ಯರುಗಳಿಗೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ನೀಡುವ ಬಗ್ಗೆ:-

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡಲಿ. ತಾವು ಯೋಚಿಸಬೇಕು. ನಾವು ಉತ್ತಮ ಸಹಕಾರ ನೀಡಿದ್ದೇವೆ, ನೀವೂ ಸಹ ಅದೇ ತರಹ ನಡೆದುಕೊಂಡಿದ್ದೀರಿ. ನಮ್ಮ ಪಕ್ಷದ 75 ಮಂದಿ ಶಾಸಕರಿದ್ದೇವೆ. ಅದಕ್ಕೋಸ್ಕರ, ಬೆಳಿಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆವರೆಗೂ ಕುಳಿತುಕೊಳ್ಳುವುದಕ್ಕೆ ಸಹಕಾರ ನೀಡುತ್ತೇವೆ. ನಮ್ಮ ಕಡೆಯಿಂದ ಇನ್ನೂ 24-25 ಶಾಸಕರುಗಳು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸಲು ಮಾತನಾಡಬೇಕಾಗಿದೆ. ಅವಶ್ಯವಿದ್ದರೆ, ಅಧಿವೇಶನದ ಅವಧಿಯನ್ನು ಸೋಮವಾರ, ಮಂಗಳವಾರದವರೆಗೂ ವಿಸ್ತರಿಸಿದರೆ ಚಿಂತೆಯಿಲ್ಲ. ಆದರೆ, ಹೊಸದಾಗಿ ಆಯ್ಕೆಯಾಗಿ ಬಂದಿರುವ, ಈ ಭಾಗದಲ್ಲಿರುವ ಶಾಸಕರುಗಳಿಗೆ ನೀವು ಪಕ್ಷದ ಆಧಾರದ ಮೇಲಾದರೂ ಸಮಯ ನಿಗದಿಪಡಿಸಬೇಕು. ನೀವು ಸಮಯ ಕೊಡದಿದ್ದರೆ, ನಮ್ಮ ಶಾಸಕರುಗಳಿಗೆ ನಾವು ಉತ್ತರಿಸುವುದು ಕಷ್ಟವಾಗುತ್ತದೆ. ಅವರೆಲ್ಲರೂ ವಿಧಾನಸಭೆಗೆ ಹೊಸದಾಗಿ ಆಯ್ಕೆಯಾಗಿ ಬಂದಿದ್ದಾರೆ. ಅವರ ಕ್ಷೇತ್ರಗಳಲ್ಲಿ ಜ್ವಲಂತ ಸಮಸ್ಯೆಗಳಿವೆ. ಅಪರೂಪಕ್ಕೆ ಎಂಟು ತಿಂಗಳಾದ ಬಳಿದ ಅಧಿವೇಶನ ಸೇರಿರುವ ಸಮಯದಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವ ಸಂದರ್ಭದಲ್ಲಿ 10-10 ನಿಮಿಷಗಳ ಕಾಲವಾದರೂ ಅವರಿಗೆ ಸಮಯ ಸಿಗದಿದ್ದರೆ, ಅವರು ಶಾಸಕರಾಗಿ ಇಲ್ಲಿಗೆ ಆಯ್ಕೆಯಾಗಿ ಬಂದು ಕುಳಿತುಕೊಳ್ಳುವುದು ಕಷ್ಟವಾಗುತ್ತದೆ. ಮತ್ತು ಜನರಿಗ ಮುಖ ತೋರಿಸಲೂ ಕಷ್ಟವಾಗುತ್ತದೆ. ಅವರಿಗೆ ಮಾತನಾಡಲು ಸಮಯವನ್ನು ಹೇಗೆ ಹೊಂದಿಸಿಕೊಡುತ್ತೀರೋ ಅದು ನಿಮಗೆ ಬಿಟ್ಟಿದ್ದು. ಬೇಕಾದರೆ, ನಾವು ಸೋಮವಾರ, ಮಂಗಳವಾರದವರೆಗೂ ಕುಳಿತುಕೊಳ್ಳಲು ಸಿದ್ದರಿದ್ದೇವೆ. ನಮ್ಮ ಪಕ್ಷದ